ಇ) ಹಾಗಿದ್ದಲ್ಲಿ, ಸದರಿ ಕಟ್ಟಡದ ನಿರ್ಮಾಣಕ್ಕೆ ಬೆಚ್ಚವಾಗುವ ಅಂದಾಜು ಬೆಚ್ಚವೆಷ್ಟು?

ಈ) ಸದರಿ ಕಟ್ಟಡವನ್ನು ಯಾವಾಗ ಕಟ್ಟಲು ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸಲು ಬೇಕಾಗುವ ಸಮಯವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಹೌದು.

ಇ) ಕಟ್ಟಡ ಕಟ್ಟಲು ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ತಯಾರಿಸಿದ ನಂತರವೇ ನಿರ್ದಿಷ್ಟವಾದ ಅಂದಾಜು ಬೆಚ್ಚ ತಿಳಿಯುತ್ತದೆ.

ಈ) ಸೂಕ್ತ ನಿವೇಶನ ಆಯ್ಕೆ ಮಾಡಿದ ನಂತರ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಸರ್ಕಾರಿ ಆಡಳಿತಾತ್ಮಕ ಮಂಜೂರಾತಿ ಪಡೆದು ಕಾಮಗಾರಿ ಪ್ರಾರಂಭಿಸಲಾಗುವುದು. ಆದಷ್ಟು ಬೇಗ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು.

ವಿಷಯ: ಹಿರೇಕೆರೂರು ತಾಲ್ಲೂಕಿನ ಮೇದೂರು ಮತ್ತು ಕುಡಪಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1385 (2191)

ಶ್ರೀ ಜಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕು ಮೇದೂರು ಮತ್ತು ಕುಡಪಲಿ ಗ್ರಾಮಗಳ ಆರೋಗ್ಯ ಕೇಂದ್ರಗಳಿಗೆ ಸರ್ಕಾರಿ ಕಟ್ಟಡಗಳಿಲ್ಲದೆ ಜನರಿಗೆ ತೊಂದರೆಯಾಗುತ್ತಿರುವುದನ್ನು ಸರಕಾರ ಗಮನಿಸಿದೆಯೆ ?

ಆ) 1992-93ನೇ ಸಾಲಿನ ಆಯವ್ಯಯದಲ್ಲಿ ಮೇದೂರು ಮತ್ತು ಕುಡಪಲಿ ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಮತ್ತು ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಗಳ ವಸತಿ ಗೃಹ ಕಟ್ಟಡಗಳನ್ನು ಕಟ್ಟಿಸಲು ಆಯವ್ಯಯದಲ್ಲಿ ಸೇರ್ಪಡಿಸಲಾಗಿದೆಯೆ ?

ಇ) ಸದರಿ ಕಟ್ಟಡಗಳ ನಿರ್ಮಾಣ ಕಾರ್ಯಗಳನ್ನು ಎಂದು ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶವೆಷ್ಟು ?

ಶ್ರೀ ಜೆ. ಪುಟ್ಟಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಇಲ್ಲ.

ಇ) ಜಿಲ್ಲಾ ಪರಿಷತ್ ತನ್ನ ಆಯವ್ಯಯದಲ್ಲಿ ಹಣ ಒದಗಿಸಿದ ನಂತರ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ವಿಷಯ: ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1386 (2199)

ಶ್ರೀಮತಿ ಮೋಟಮ್ಮ (ಮುಡಿಗೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆಳಕಂಡ ಸಂಘ ಸಂಸ್ಥೆಗಳಿಗೆ ರಾಜ್ಯ ಸಮಾಜ ಕಲ್ಯಾಣ ಮಂಡಳಿಯಿಂದ ಯಾವ ಯಾವ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಿರುವರು ?

ಆ) ಗ್ರ್ಯಾಟ್-ಇನ್-ಏಡ್ ನಿಯಮ ಪಾಲಿಸಿದ್ದೀರಾ ?

ಇ) ಇಲ್ಲದೇ ಹೋದರೆ ಕಾರಣಗಳನ್ನು ಕೊಡಿ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ)

	ವರ್ಷ	ಕಾರ್ಯಕ್ರಮ	ಮಂಜೂರು	ಬಿಡುಗಡೆ
1) ಪ್ರಯಾ ಮಹಿಳಾ ಮಂಡಳಿ ಮೂಡಲಪಾಳ್ಯ,ಬೆಂಗಳೂರು	1991-92	ಎಸ್.ಇ.ಪಿ.ಸಾಮೂಹಿಕ ಆರ್ಥಿಕ ಕಾರ್ಯಕ್ರಮ. (ಡೈರಿ)	83,480-00	77,240-00
2) ಕೃಪಾಸಾಗರ್, ಬೆಂಗಳೂರು	1991-92	ಸಾಮೂಹಿಕ ಆರ್ಥಿಕ ಕಾರ್ಯಕ್ರಮ. (ಸ್ವಯಂ ಉದ್ಯೋಗ) ನೂಕು ಗಾಡಿ.	1,29,500-00	1,27,250-00
	1990-91	ಜಾಗೃತಿ ಮೂಡಿಸುವ ಕಾರ್ಯಕ್ರಮ.	20,000-00	20,000-00
	1991-92	"	50,000-00	ಮಾಡಬೇಕಾಗಿದೆ
	1990-91	ವಾರ್ಷಿಕ ವರಮಾನ	750-00	750-00
	1991-92	"	9,000-00	9,000-00
	1991-92	ಪೌಷ್ಟಿಕ ಆಹಾರ	7,650-00	3,825-00
	1991-92	ಸಂಕ್ಷಿಪ್ತ ಶಿಕ್ಷಣ	63,037-00	50,000-00
3)ಆಲ್ ಏಜುಕೇಷನ್ ಸೊಸೈಟಿ, ಬೆಂಗಳೂರು	1990-91	ಜಾಗೃತಿ ಮೂಡಿಸುವ ಕಾರ್ಯಕ್ರಮ	20,000-00	20,000-00
	1991-92	" "	50,000-00	ಬಿಡುಗಡೆಮಾಡಬೇಕಾಗಿದೆ
	1990-91	ವಾರ್ಷಿಕ ಅನುದಾನ	9,600-00	9,600-00
	1991-92	" "	9,600-00 3,000-00 (ಸಲಕರಣೆ ಸೇರಿ)	12,600-00
	1991-92	ಪೌಷ್ಟಿಕ ಆಹಾರ	18,900-00	9,450-00
	1991-92	ವೃತ್ತಿ ಶಿಕ್ಷಣ (ಟೈಲರಿಂಗ್)	60,800-00	50,000-00
4)ಐಡಿಯಲ್ ಏಜುಕೇಷನ್ ಸೊಸೈಟಿ ಗುಲ್ಬರ್ಗ	ಈ ಹೆಸರಿನ ಸಂಸ್ಥೆಗೆ ಯಾವುದೇ ತೆರವಾದ ಅನುದಾನವನ್ನು ಮಂಡಳಿಯಿಂದ ನೀಡುತ್ತಿಲ್ಲ			
5)ಮಾಣಿಕ್ ಪ್ರಭು,ಗುಲ್ಬರ್ಗ	1991-92	ಸಂಕ್ಷಿಪ್ತ ಶಿಕ್ಷಣ	67,975-00	ಬಿಡುಗಡೆ ಮಾಡಬೇಕಾಗಿದೆ.
	1990-91	ಶಿಶುಪಾಲನಾ ಕೇಂದ್ರ	30ಕೇಂದ್ರಗಳನ್ನು ಕೇಂದ್ರ ಸಮಾಜ ಕಲ್ಯಾಣ ಮಂಡಳಿಯು ಮಂಜೂರು ಹಾಗೂ ಬಿಡುಗಡೆ ಮಾಡಲ್ಪಟ್ಟಿದೆ.	

ಆ) ಹೌದು.

ಇ) ಉದ್ಭವಿಸುವುದಿಲ್ಲ.